ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಪೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 20। Udp/1263/2015-17 || R.NO.50495/91 ॥ ತಾರೀಕು : 31–05–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

# ಅಮಾಸೆಬೈಲ್‌ನಲ್ಲಿ ಸೂರ್ಯಕ್ರಾಂತಿ

# 1497 ಮನೆಗಳಿಗೆ ಸೋಲಾರ್ ದೀಪ

ಅಮಾಸೆಬೈಲ್‌ನ ಗ್ರಾಮಪಂಚಾಯತ್ ವ್ಯಾಪ್ತಿಯ 1700 ಮನೆಗಳಲ್ಲಿ 1497 ಮನೆಗಳಿಗೆ ಸೋಲಾರ್ ದೀಪ ಅಳವಡಿಸಲಾಗುತ್ತಿದ್ದು ರಾಜ್ಯದಲ್ಲೇ ಪ್ರಪ್ರಥಮವಾಗಿ ಗ್ರಾಮವನ್ನು ಸಂಪೂರ್ಣ ಸೋಲಾರ್ ಗ್ರಾಮವನ್ನಾಗಿ ರೂಪಿಸುವ ಗುರಿ ಇರಿಸಿಕೊಳ್ಳಲಾಗಿದೆ. ಇದರಿಂದ ವಿದ್ಯುತ್ ಉಳಿತಾಯ ಹಾಗೂ ಪ್ರತಿ ಮನೆಗೂ ಪರ್ಯಾಯ ಬೆಳಕು ಲಭಿಸಲಿದೆ.

ಅಮಾಸೆಬೈಲ್ ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಎ.ಜಿ.ಕೊಡ್ಗಿಯವರು ಕುಂದಾಪುರದಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರಗಳನ್ನು ತಿಳಿಸಿದರು.

ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (MNTE) ಯಿಂದ ಶೇ 30 ಮತ್ತು ಕರ್ನಾಟಕ ರಾಜ್ಯದ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (KREDL) ದಿಂದ ಶೇ 20 ಮತ್ತು ನಕ್ಸಲ್ ಪೀಡಿತ ಪ್ರದೇಶಾಭಿವೃದ್ಧಿ ನಿಧಿಯಿಂದ ರೂ 25 ಲಕ್ಷ ಮತ್ತು ಫಲಾನುಭವಿಗಳ ವಂತಿಗೆಯೊಂದಿಗೆ ಅಮಾಸೆಬೈಲು ಚಾರಿಟೇಬಲ್ ಟ್ರಸ್ಟ್ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿದೆ.

"ಸೆಲ್ಕೊ" ಸಂಸ್ಥೆ ಇ–ಟೆಂಡರ್ ಮೂಲಕ ಸೋಲಾರ್ ದೀಪ ಅಳವಡಿಸುವ ಗುತ್ತಿಗೆ ಪಡೆದಿದ್ದು 5 ವರ್ಷಗಳ ಸಂಪೂರ್ಣ ನಿರ್ವಹಣೆ ಮಾಡಲಿದೆ.

ಅಮಾಸೆಬೈಲು ಗ್ರಾಮ ಪಂಚಾಯತ್, ಕರ್ಣಾಟಕ ಬ್ಯಾಂಕ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗ ದೊಂದಿಗೆ ಅಮಾಸೆಬೈಲು ಚಾರಿಟೇಬಲ್ ಟ್ರಸ್ಟ್ ಈ ಯೋಜನೆ ಅನುಷ್ಠಾನಕ್ಕೆ ತರುತ್ತಿದೆ.

ಫಲಾನುಭವಿಗಳು 2 ದೀಪಕ್ಕೆ 3 ಸಾವಿರ ರೂ, 4 ದೀಪಕ್ಕೆ 6 ಸಾವಿರ ನೀಡಿದರಾಯಿತು. ಬೀದಿ ದೀಪಕ್ಕೆ ಗ್ರಾಮಪಂಚಾಯತ್ ಕೊಡುಗೆ ನೀಡುತ್ತದೆ. ಎರಡು ದೀಪಕ್ಕೆ 9,900 ಹಾಗೂ 4 ದೀಪಕ್ಕೆ 16,000 ರೂ ತಗಲುತ್ತದೆ. ಬೀದಿ ದೀಪಕ್ಕೆ 23,500 ರೂ ತಗಲುತ್ತದೆ.

**ಮಾದರಿ ಗ್ರಾಮ ಯೋಜನೆಗಳು**

ಅಮಾಸೆಬೈಲು ಗ್ರಾಮವನ್ನು ಸಂಪೂರ್ಣವಾಗಿ ರಾಜ್ಯದ ಮಾದರಿ ಗ್ರಾಮವನ್ನಾಗಿ ಪರಿವರ್ತಿಸಲು ಅಮಾಸೆಬೈಲು ಚಾರಿಟೇಬಲ್ ಟ್ರಸ್ಟ್ ಮಹತ್ವದ ಯೋಜನೆಗಳ ಅನುಷ್ಠಾನಕ್ಕೆ ಸಿದ್ಧವಾಗಿದೆ.

ಎಲ್ಲಾ ಕುಟುಂಬಗಳಿಗೆ ಪಕ್ಕಾಮನೆ, ಶೌಚಾಲಯ, ಶುದ್ಧ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಒದಗಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ.

ಬಿ.ಪಿ.ಎಲ್. ಕುಟುಂಬಗಳಿಗೆ ಆರೋಗ್ಯ ರಕ್ಷಣೆ, ಎಲ್ಲಾ ಮಕ್ಕಳಿಗೆ ಪ್ರಾಥಮಿಕ, ಪ್ರೌಢ ಶಿಕ್ಷಣ, ಅನಕ್ಷರಸ್ಥರಿಗೆ ಶಿಕ್ಷಣ, ಎಲ್ಲಾ ಕುಟುಂಬಗಳಿಗೆ ವಿಮಾ ಸೌಲಭ್ಯ ಅರ್ಹ ಫಲಾನುಭವಿಗಳಿಗೆ ಉದ್ಯೋಗ ಇವು ಪ್ರಮುಖ ಯೋಜನೆಗಳಾಗಿವೆ.



**ಅಭಿವೃದ್ಧಿ ಪಥ**

ಅಮಾಸೆಬೈಲು ಗ್ರಾಮ ಪಂಚಾಯತ್ ಪ್ರಾಪ್ತಿಯಲ್ಲಿ ಕೃಷಿ ನೀರಾವರಿ ಸೌಲಭ್ಯ, ಹೈನುಗಾರಿಕೆ, ಸ್ವ ಉದ್ಯೋಗಗಳಿಗೆ ಸಾಲ ಸೌಲಭ್ಯ, ಕೃಷಿ–ಹೈನುಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಕುಡಿಯುವ ನೀರು ಯೋಜನೆ, ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ನಿಲಯಗಳು, ಅಂಬ್ಯುಲೆನ್ಸ್ ಸೌಲಭ್ಯ, ದೇವಸ್ಥಾನ, ಚರ್ಚ್, ಮಸೀದಿಗಳ ಜೀರ್ಣೋದ್ಧಾರ, ಕಲ್ಯಾಣಭವನ, ಸಭಾಭವನ ನಿಮಾಣ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಸಾಮೂಹಿಕ ವಿವಾಹಕ್ಕೆ ಪ್ರೋತ್ಸಾಹ ಮುಂತಾದವುಗಳು ಮಾದರಿ ಗ್ರಾಮದ ಅಭಿವೃದ್ಧಿ ಪಥದಲ್ಲಿ ಮುಂದುವರಿಯಲು ಅನುಷ್ಠಾನಗೊಳ್ಳಲಿರುವ ಯೋಜನೆಗಳಾಗಿವೆ.





**ಸಂಪನ್ಮೂಲದ ಶಕ್ತಿ**

ಈ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರಕಾರದ ಯೋಜನೆಗಳು, ಗ್ರಾ.ಪಂ. ಅಮಾಸೆಬೈಲು, ಕರ್ಣಾಟಕ ಬ್ಯಾಂಕ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಚಾರಿಟೇಬಲ್ ಟ್ರಸ್ಟ್, ಭಾರತೀಯ ವಿಕಾಸ ಟ್ರಸ್ಟ್, ಸಹಕಾರಿ ಸಂಘ ಅಮಾಸೆಬೈಲು, ಶಾಸಕರ, ಲೋಕಸಭಾ, ರಾಜ್ಯಸಭಾ ಸದಸ್ಯರ



ಅನುದಾನಗಳು ಫಲಾನುಭವಿಗಳ ವಂತಿಗೆ, ಸಂಘ ಸಂಸ್ಥೆಗಳ ಕೊಡುಗೆ ಸಂಪನ್ಮೂಲವಾಗಿ ಪಡೆಯಲಾಗುತ್ತದೆ.

ಈಗಾಗಲೇ ಅನುಷ್ಠಾನಗೊಂಡಿರುವ ಯೋಜನೆಗಳಿಗೆ ಸರಕಾರದ ಯೋಜನೆಗಳಿಂದ, ಶಾಸಕರ, ಲೋಕಸಭಾ ಸದಸ್ಯರ ಅನುದಾನದಿಂದ ಪಡೆದ ಆರ್ಥಿಕ ನೆರವಿನ ವಿವರಗಳನ್ನು ಎ.ಜಿ.ಕೊಡ್ಗಿಯವರು ನೀಡಿದರು.

## ಜೂನ್ 1: ವಿವಿಧ ಕಾಮಗಾರಿಗಳ ಲೋಕಾರ್ಪಣೆ

ಅಮಾಸೆಬೈಲು ಗ್ರಾಮದಲ್ಲಿ ಅನುಷ್ಠಾನಗೊಳ್ಳಲಿರುವ ಸೋಲಾರ್ ದೀಪ ಮತ್ತು ವಿವಿಧ ಕಾಮಗಾರಿಗಳ ಲೋಕಾರ್ಪಣೆ ಜೂನ್ 1 ರಂದು ನಡೆಯಲಿದೆ.

ಅಮಾಸೆಬೈಲು ಪ್ರೌಢಶಾಲೆ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಸಮಾರಂಭ ನಡೆಯಲಿದ್ದು, ನಿವೃತ್ತ ಲೋಕಾಯುಕ್ತ, ನ್ಯಾಯಮೂರ್ತಿ ಸಂತೋಷ ಹೆಗ್ಡೆ ಸಮಾರಂಭ ಹಾಗೂ ಸೋಲಾರ್ ದೀಪ ಯೋಜನೆ ಉದ್ಘಾಟಿಸಲಿದ್ದಾರೆ. ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ।ಎಲ್.ಎಚ್.ಮಂಜುನಾಥ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವರಾದ ವಿನಯಕುಮಾರ್ ಸೊರಕೆ, ಅಭಯಚಂದ್ರ ಜೈನ್, ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಜಯರಾಮ ಭಟ್, ಡಾ।ಮೋಹನ್ ಆಳ್ವ, ಜಿ.ಪಂ.ಅಧ್ಯಕ್ಷ ದಿನಕರ ವಿವಿಧ ಯೋಜನೆಗಳ ಕಾಮಗಾರಿ ಉದ್ಘಾಟಿಸಲಿದ್ದಾರೆ.

(ಹಿಂದಿನ ಪುಟಕ್ಕೆ)

## ಪಿಯುಸಿ ಅಕ್ಷಯ್‌ರಾವ್ ರಾಜ್ಯಕ್ಕೆ 4 ನೇ ಸ್ಥಾನ

ಕುಂದಾಪುರದ ಆರ್.ಎನ್.ಶೆಟ್ಟಿ ಪ.ಪೂ. ಕಾಲೇಜು ವಿಜ್ಞಾನ ವಿಭಾಗದ ವಿದ್ಯಾರ್ಥಿ ಅಕ್ಷಯ್ ಜಿ.ರಾವ್ ಅವರು 600 ಅಂಕಗಳಲ್ಲಿ 593 ಅಂಕಗಳನ್ನು ಪಡೆಯುವ ಮೂಲಕ ರಾಜ್ಯದಲ್ಲಿ 4 ನೇ ಸ್ಥಾನವನ್ನು ಪಡೆದಿದ್ದಾನೆ. ವಿಜ್ಞಾನದಲ್ಲಿ ಸ್ಟ್ಯಾಟ್ , ಗಣಿತ, ಸಂಸ್ಕೃತ ದಲ್ಲಿ 100ಕ್ಕೆ



100 ಅಂಕಗಳಿಸಿದ ಈತ ಮುಂದೆ ಎಲೆಕ್ಟ್ರಾನಿಕ್ ಎಂಡ್ ಕಮ್ಯುನಿಕೇಶನ್‌ನಲ್ಲಿ ಇಂಜಿನಿಯರ್ ಆಗುವ ಆಸಕ್ತಿ ಹೊಂದಿದ್ದಾನೆ. ಸಂಗೀತದಲ್ಲಿ ಆಸಕ್ತಿ ಹೊಂದಿರುವ ಈತ ಯಾವುದೇ ಟ್ಯೂಷನ್‌ಗೆ ಹೋದವನಲ್ಲ. ಇವರ ತಂದೆ ನ್ಯಾಯವಾದಿ ಟಿ. ಗುರುಮೂರ್ತಿ ಹಾಗೂ ತಾಯಿ ಗೀತಾ ಗೃಹಿಣಿ.

## ಗಂಗೊಳ್ಳಿ ಕುಂದಾಪುರ ಸೇತುವೆಗೆ ಬೆಂಬಲ
## ಕುಂದಾಪುರ ಪುರಸಭೆ ಸರ್ವಾನುಮತದ ನಿರ್ಣಯ

ಗಂಗೊಳ್ಳಿ ಕುಂದಾಪುರ ನಡುವೆ ಸಂಪರ್ಕ ಸೇತುವೆ ನಿರ್ಮಾಣ ಯೋಜನೆಗೆ ಕುಂದಾಪುರ ಪುರಸಭೆ ಸರ್ವಾನುಮತದ ಬೆಂಬಲ ವ್ಯಕ್ತಪಡಿಸಿ ನಿರ್ಣಯ ಕೈಗೊಂಡಿದೆ.

ಗಂಗೊಳ್ಳಿ ಕುಂದಾಪುರದ ನಡುವೆ ಸೇತುವೆ ನಿರ್ಮಾಣವಾದಲ್ಲಿ ಕುಂದಾಪುರ ಗಂಗೊಳ್ಳಿ ಪ್ರಯಾಣಕ್ಕೆ ತುಂಬ ಕಡಿಮೆ ಸಮಯ ಸಾಕಾಗುತ್ತದೆ. ವ್ಯಾವಹಾರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕುಂದಾಪುರ ಕರಾವಳಿ ಭಾಗದಲ್ಲಿ ಒಂದು ಮಹತ್ತರ ಬದಲಾವಣೆ ಉಂಟಾಗುತ್ತದೆ ಸದ್ರಿ ಯೋಜನೆ ಅನುಷ್ಠಾನಗೊಳಿಸಲು ಪುರಸಭೆ ಸಂಪೂರ್ಣ ಬೆಂಬಲ ನೀಡುವುದಾಗಿ ನಿರ್ಣಯಿಸಲಾಯಿತು

(4ನೇ ಪುಟಕ್ಕೆ)

## ಸುಣ್ಣಾರಿ ಎಕ್ಸಲೆಂಟ್ ಪದವಿಪೂರ್ವ ಕಾಲೇಜು
## 2015–16 ನೇ ಸಾಲಿನ ವಿದ್ಯಾರ್ಥಿಗಳ ಸಾಧನೆ



ವಾಸವಿ ಉಡುಪ



ಶಹರಿ ಶೆಟ್ಟಿ

ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳನ್ನು ಒಗ್ಗೂಡಿಸಿಕೊಂಡು ಸಾಧನೆ ಮಾಡುತ್ತಿರುವ ಕುಂದಾಪುರದ ಸುಣ್ಣಾರಿಯ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜು ಸಿಇಟಿ ಫಲಿತಾಂಶದಲ್ಲೂ ತನ್ನನ್ನು ಗುರುತಿಸಿಕೊಂಡಿದ್ದು, ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7 ನೇ ರ್‍ಯಾಂಕ್ (590 ಅಂಕ) ಪಡೆದ ವಾಸವಿ ಉಡುಪ, ಸಿಇಟಿ ವೈದ್ಯಕೀಯ ವಿಭಾಗದಲ್ಲಿ 589, ಎಂಜಿನಿಯರಿಂಗ್ ವಿಭಾಗದಲ್ಲಿ 604 ಅಂಕ ದಾಖಲಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಐದು ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾಳೆ. ಸಿಇಟಿಯಲ್ಲಿ ಉತ್ತಮ ಸಾಧನೆ ಮಾಡಿರುವುದು ಸಾಧನೆಗೆ ಗರಿ ಮೂಡಿಸಿದಂತಾಗಿದೆ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7 ನೇ ರ್‍ಯಾಂಕ್‌ನ್ನು ಶಹರಿ ಶೆಟ್ಟಿ (590) ಪಡೆದಿದ್ದಾಳೆ. ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಅಕ್ಷತಾ (574) ಅಂಕ ಹಾಗೂ ಕಿರಣ್ (570) ಅಂಕ ಪಡೆದಿರುತ್ತಾರೆ. ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಎಂ.ಮಹೇಶ್ ಹೆಗ್ಡೆ ಪ್ರಶಂಸೆ ವ್ಯಕ್ತಪಡಿಸಿ ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

(6ನೇ ಪುಟಕ್ಕೆ)